424

ಮೈಸೂರ ಗೆಜಿಟ್.

ನಂ. 42.] ಸರ್ಕಾರವಿಂದ ಪ್ರಾಯುಷ ಆದ್ದು. [ನಂ. 34

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 22, ಸಕ್ 1907.

II ನೆ ಬಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಗೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 12ನೆ ಆಗಸ್ಟ್ 1907.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟ್ ಬೌರಿಂಗ್‌ಪೇಟೆ ತಾಲ್ಲೂಕಿಗೆ ಶೇರಿದ ವಿಶಿಷ್ಟ ಸ್ಪೆಷಲ್ ಫಾರೆಸ್ಟ್ ಪ್ಲಾಟೇಷನ್ ಮತ್ತು ಇತರ ಸರ್ಕಾರಿ ಜಮೀನುಗಳಲ್ಲಿ ಇರುವ ತಂಗಡಿ ಮತ್ತು ಕಪ್ಪೆ ಚಕ್ಕೆಯನ್ನು 1908ನೆ ಇಸವಿ ಜೂನ್ 30ರ ವರಿಗೆ ರೂಢಿಸಿ ಜವಾಯಿಸತಕ್ಕ ಪಕ್ಕನ್ನು ಪಡಿಯಲು 1907ನೆ ಸೆಪ್ಟಂಬರು 11ನೆ ತಾರೀಖಿನ ವರಿಗೆ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು:—

ನೋಟಿ:— ಇನಾಂ ಜೋಡಿ, ಪಾಯಂಗುತ್ತಾ, ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರಿರುವದಿಲ್ಲ.

2. ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್‌ವರ ಆಫೀಸಿನಲ್ಲಿ 1907ನೆ ಇಸವಿ ಸೆಪ್ಟಂಬರು 12ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

3. ಇತರ ಷರತ್ತುಗಳಿಗೆ 1907ನೆ ಇಸವಿ ಜುಲೈ 18ನೆ ತಾರೀಖಿನ ಮೈಸೂರು ಗೆಜೆಟ್ಟಿನ ಎರಡನೇ ಭಾಗದಲ್ಲಿ ಫಾಯಿಷ್ ಆಗಿರುವ ಈ ಇಲಾಖಾ 1907ನೆ ಜುಲೈ 12ನೆ ಮರ್ಕುಂನ ನೋಟಿಫಿಕೇಷನ್‌ಗೆ ಗಮನ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.